ಶ್ರೀ ಹೆಚ್. ಡಿ. ದೇವೇಗೌಡ.— ಇನ್ನೂ ೧೦ ಪಿಕ್‌ಅಪ್‌ಗಳನ್ನು ಮಾಡಲಿಕ್ಕೆ ಸಾಧ್ಯವಿದೆ. ಅದಕ್ಕೆ ೬೦ ಲಕ್ಷ ರೂಪಾಯಿ ಹಣ ಬೇಕು. ಹಣದ ಆವಶ್ಯಕತೆಯನ್ನು ಅವಲಂಬಿಸಿಕೊಂಡು ಕೆಲಸ ಮಾಡಬೇಕಾಗುತ್ತದೆ. ಎಲ್ಲವನ್ನೂ ಒಟ್ಟಿಗೆ ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ರಾಮಪ್ಪ.— ಕೆಲವು ರೈತ ಸಂಘದ ಅಧ್ಯಕ್ಷರು ಪಿಕ್‌ಅಪ್‌ಗಳನ್ನು ಮಾಡಿದರೆ ಟೋಲ್ ಎಂಡ್‌ನಲ್ಲಿರತಕ್ಕ ನಮ್ಮ ೪೦ ಎಕರೆ ಆಯಕಟ್ಟಿಗೆ ನೀರು ಸಿಕ್ಕುವುದಿಲ್ಲ ಎಂದು ಹೇಳಿದ್ದಾರೆ ಅದಕ್ಕೊಸ್ಕರ ಮಾಡುತ್ತಿಲ್ಲ ಎನ್ನುವ ಅನುಮಾನ ನಮ್ಮ ತಾಲ್ಲೂಕಿನಲ್ಲಿ ಬಂದಿದೆ ಅದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ?

ಶ್ರೀ ಹೆಚ್. ಡಿ. ದೇವೇಗೌಡ.— ರೈತ ಸಂಘದವರು ಸಮಸ್ಯೆ ಇತ್ತೀಚಿನ ಸಮಸ್ಯೆ. ಪಿಕ್‌ಅಪ್ ಕಟ್ಟುತಕ್ಕ ವಿಚಾರ ಮೊದಲಿನಿಂದಲೂ ಇದೆ.

ಶ್ರೀ ಎಂ. ರಾಮಪ್ಪ.— ಇವೊತ್ತು ರೈತ ಸಂಘದವರು ಹೇಳತಕ್ಕದ್ದರ ಬಗ್ಗೆ ಒಪ್ಪಿಕೊಂಡಿದ್ದಾರೆ ಎನ್ನುವ ಅನುಮಾನ ಬಂದಿದೆ. ಆದ್ದರಿಂದ ಈ ವಿಚಾರವನ್ನು ಕೇಳಬೇಕಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.— ಅವರು ಹೇಳುವುದು ಕೇಳಬಾರದು ಎಂದು ಅಲ್ಲ. ಅವರು ಹೇಳುವುದು ಯೋಗ್ಯವಿದ್ದರೆ ಅವರು ಹೇಳುವುದನ್ನು ಸ್ವೀಕಾರ ಮಾಡಬೇಕಾಗುತ್ತದೆ. ಸನ್ಮಾನ್ಯ ಸದಸ್ಯರು ಹೇಳುವುದನ್ನು ಪರಿಗಣಿಸಲಿಕ್ಕೆ ಸಿದ್ಧರಿದ್ದೇವೆ. ಅವರಿಗೆ ಅನುಕೂಲ ಮಾಡಿಕೊಡಬೇಕೆಂಬುದು ಇಲ್ಲ. ಹಣದ ತೊಂದರೆಯಿಂದ ಎಲ್ಲಾ ಪಿಕ್‌ಅಪ್ ಒಟ್ಟಿಗೆ ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಈಗ ಎರಡು ಪಿಕ್‌ಅಪ್‌ಗಳನ್ನು ಮಾಡಲಿಕ್ಕೆ ಹಣ ಎಷ್ಟು ಬೇಕೋ ಅಷ್ಟು ಕೊಡಲಿಕ್ಕೆ ಸಿದ್ಧರಿದ್ದೇವೆ. ಮಾನ್ಯ ಸದಸ್ಯರು ಲ್ಯಾಂಡ್ ಅಕ್ವಿಸಿಷನ್‌ಗೆ ಸಹಕರಿಸಿದರೆ ಸಾಕು.

ಶಿವಮೊಗ್ಗಾ ಮೈಕಾ ಮ್ಯಾಚ್ ಕಂಪನಿ ವಿಚಾರ

೮೬ (೧೯೧) ಶ್ರೀ ಎಂ. ಆನಂದರಾವ್ (ಶಿವಮೊಗ್ಗ).— ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಶಿವಮೊಗ್ಗೆಯ ಮ್ಯಾಚ್ ಕಂಪನಿಯಲ್ಲಿ ಸರ್ಕಾರದವರ ಷೇರು ಭಾಗ ಎಷ್ಟು?

ಆ) ವಿಮ್ಕೋ ಕಂಪನಿಗೆ ಯಾವಾಗ ಹಾಗೂ ಎಷ್ಟು ವರ್ಷಗಳವರೆಗೆ ಗುತ್ತಿಗೆ ನೀಡಲಾಗಿತ್ತು? ಯಾವಾಗ ಗುತ್ತಿಗೆ ಅವಧಿ ಮುಗಿದಿದೆ?

ಇ) ವಿಮ್ಕೋದವರು ಕೇರಳದ ಒಂದು ಪ್ಲೈವುಡ್ ಕಂಪನಿಗೆ ಮೂರು ಗುತ್ತಿಗೆ ಕೊಟ್ಟಿರುವುದು ನಿಜವೆ?

ಈ) ವಿಮ್ಕೋದಿಂದ ಸರ್ಕಾರಕ್ಕೆ ಎಷ್ಟು ಹಣ ಗುತ್ತಿಗೆ ಬರಬೇಕಾಗಿದೆ?

ಶ್ರೀ ಜಿ. ವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಅಧಿಕೃತ ಷೇರು ಬಂಡವಾಳ ... ೧೦ ಲಕ್ಷ ರೂ.

ಒಟ್ಟು ಪಾವತಿಯಾಗಿರತಕ್ಕ ಷೇರು ಬಂಡವಾಳದ ವಿವರಗಳು:

೧) ಕೆ. ಎಸ್. ಎಫ್. ಐ. ಸಿ. — ೨೯೪೫೫ ಷೇರುಗಳು — ಪ್ರತಿಯೊಂದು ರೂ. ೧೦ರ ಮೊಬಲಗು	...	೨,೯೪,೫೫೦-೦೦ ಶೇಕಡ ೫೯
೨) ಕರ್ನಾಟಕ ಸರ್ಕಾರ ರೂ. ೧೦ರ ೫೦೦೦ ಷೇರುಗಳು	...	೫೦,೦೦೦-೦೦ ಶೇಕಡ ೧೦
೩) ಸಾರ್ವಜನಿಕರಿಂದ ರೂ. ೧೦ರ ೧೫೩೨೪ ಷೇರುಗಳು	...	೧,೫೩,೨೪೦-೦೦ ಶೇಕಡ ೩೧
ಒಟ್ಟು ರೂ.		೪,೯೫,೨೯೦-೦೦

ಆ) ಮೈಸೂರು ಮ್ಯಾಚ್ ಕಂಪನಿಯನ್ನು ವಿಮ್ಕೋ ಕಂಪನಿಗೆ ದಿನಾಂಕ ೧೮-೭-೧೯೭೭ರಿಂದ ೫ ವರ್ಷ ಅವಧಿಗೆ ಗುತ್ತಿಗೆಗೆ ನೀಡಲಾಗಿತ್ತು. ಈ ಅವಧಿ ದಿನಾಂಕ ೧೭-೭-೧೯೮೨ಕ್ಕೆ ಮುಗಿಯಿತು.

ಇ) ವಿಮ್ಕೋ ಕಂಪನಿ ಮತ್ತು ವೆಸ್ಟ್ರನ್ ಇಂಡಿಯಾ ಪ್ಲೈವುಡ್ ಲಿಮಿಟೆಡ್ ಕೇರಳ ಇವರ ನಡುವೆ ದಿನಾಂಕ ೨೦-೧೨-೧೯೮೨ರಂದು ಆಗಿರತಕ್ಕ ಕರಾರುಪತ್ರದ ಪ್ರಕಾರ ಮೈಸೂರು ಮ್ಯಾಚ್ ಕಂಪನಿಯನ್ನು ಪುರು ಗುತ್ತಿಗೆಗೆ ಕೊಟ್ಟಿರುವುದಾಗಿ ಭಾವಿಸಲಾಗಿದೆ. ಆದರೆ ವಿಮ್ಕೋ ಕಂಪನಿಯವರು ಇದನ್ನು ಪುರು ಗುತ್ತಿಗೆಯಲ್ಲ. ಇದು ಕೇವಲ ಪಾರಾಟದ ಕರಾರು ಎಂದು ತಿಳಿಸಿದ್ದಾರೆ. ಈ ವಿಷಯ ಶಿವಮೊಗ್ಗದ ಅಡಿಷನಲ್ ಸಿವಿಲ್ ಜಡ್ಜ್ ನ್ಯಾಯಾಲಯದ ಮುಂದೆ ತೀರ್ಪಾನಕ್ಕಾಗಿ ಇದೆ.

ಈ) ವಿಮ್ಕೋ ಕಂಪನಿಯಿಂದ ಮೈಸೂರು ಮ್ಯಾಚ್ ಕಂಪನಿಗೆ ದಿನಾಂಕ ೧೭-೭-೧೯೮೨ರವರೆಗೆ ಗುತ್ತಿಗೆ ಹಣ ಮತ್ತು ಅದರ ಮೇಲಿನ ಬಡ್ಡಿ ಸೇರಿ ರೂ.೧೪,೩೩೫-೩೫ ಬಾಕಿ ಇದೆ ಮತ್ತು ೧೭-೭-೧೯೮೨ರಿಂದ ವೊಕದ್ದಮೆಯನ್ನು ಹೂಡಿದ ದಿನಾಂದವರೆಗೆ ಅತಿಕ್ರಮ ಪ್ರವೇಶಮತ್ತು ಸ್ವಾಧೀನಪಡಿಸಿಕೊಂಡಿರುವುದಕ್ಕೆ ರೂ. ೨.೮೦,೦೦೦-೦೦ ಪರಿಹಾರವನ್ನು ನ್ಯಾಯಾಲಯದಲ್ಲಿ ಕೇಳಲಾಗಿದೆ. ಈ ಬಗ್ಗೆ ವಿಮ್ಕೋ ಕಂಪನಿಯವರು ಸ್ವಪ್ರೇರಣೆಯಿಂದ ನ್ಯಾಯಾಲಯದಲ್ಲಿ ರೂ. ೩,೦೦೦೦-೦೦ವನ್ನು ಮುಂಗಡವಾಗಿ ಕಟ್ಟಿದ್ದಾರೆ.

ಶ್ರೀ ಎಂ. ಆನಂದರಾವ್.—ಮಾನ್ಯ ಅಧ್ಯಕ್ಷರೆ, ಈ ಉತ್ತರಗಳನ್ನು ನೋಡಿದಾಗ ವಿಮ್ಕೋ ಕಂಪನಿಗೆ ಮತ್ತು ಸರ್ಕಾರಕ್ಕೆ ಇದ್ದಂಥ ಅವ್ಯವಹಾರ ಏನಿದೆ ಇದರಲ್ಲಿ ಶೇಡೀ ಡೀಲ್ ಇದೆ ಎಂದು ಕಾಣುತ್ತದೆ, ಅಕ್ರಮ ಇದೆ. ಲಿಸ್ ಆಗ್ರಿಮೆಂಟ್‌ಗೆ ನವೀಕರಣ ಕೂಡ ಆಗಿಲ್ಲ. ಕಾನೂನು ಇಲಾಖೆ ಒಪ್ಪಿಗೆ ಕೂಡ ಕೊಟ್ಟಿಲ್ಲ ಎಂದು ತಿಳಿದು ಬಂದಿದೆ. ಈ ಎಲ್ಲಾ ಸನ್ನಿವೇಶಗಳಲ್ಲಿ ಸರ್ಕಾರ ಈ ಸದರಿ ಗುತ್ತಿಗೆಯನ್ನು ರದ್ದುಪಡಿಸಿ ಕರ್ನಾಟಕ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಖಾಂತರ ಬೆಂಕಿ ಪೆಟ್ಟಿಗೆಗೆ ಬೇಕಾದಂಥ ಕಡ್ಡಿ, ಹಾಳಿ ತಯಾರಿಸಲಿಕ್ಕೆ ಕ್ರಮ ತೆಗೆದುಕೊಂಡು ತುಂಬಾ ಜನರಿಗೆ ಕೆಲಸ ಕೊಟ್ಟು ಒಂದು ಕೋಟಿ ರೂಪಾಯಿ ಬೆಲೆ ಬಾಳತಕ್ಕ ಆಸ್ತಿಯನ್ನು ರಕ್ಷಣೆ ಮಾಡಲಿಕ್ಕೆ ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಬಿ.ಎ. ಜೀವಿಜಯ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ವಿಮ್ಕೋ ಕಂಪನಿಗೂ ಮತ್ತು ಸರ್ಕಾರಕ್ಕೂ ಶೇಡೀ ಡೀಲ್ ಇದೆ ಎಂದು ಏನು ಹೇಳಿದ್ದಾರೆ ಅದನ್ನು ನಾನು ಅಲ್ಲಗೆಳೆಯುತ್ತೇನೆ. ವಿಮ್ಕೋ ಕಂಪನಿಯವರು ಏನು ಒಂದು ಕರಾರು ಮಾಡಿಕೊಂಡಿದ್ದಾರೆ ಅದು ಸರ್ಕಾರಕ್ಕೆ ಗೊತ್ತಿಲ್ಲದ ಹಾಗೆ ಮಾಡಿಕೊಂಡಿದ್ದಾರೆ. ನಾವು ಕರಾರು ಮಾಡಿಕೊಂಡಿಲ್ಲ ಎಂದು ಹೇಳಿದ್ದಾರೆ. ಅವರು ಸರ್ಕಾರಕ್ಕೆ ೧೯೭೮ ರಿಂದ ೧೯೭೯ರವರೆಗೆ ೩೫ ಸಾವಿರ ರೂಪಾಯಿಗಳನ್ನು, ಎರಡನೇ ವರ್ಷದಲ್ಲಿ ಒಂದು ಲಕ್ಷದ ಐದು ಸಾವಿರ ರೂಪಾಯಿಗಳನ್ನು, ೪ ಮತ್ತು ೫ನೇ ವರ್ಷದಲ್ಲಿ ೨.೧೦ ಲಕ್ಷ ರೂ.ಗಳನ್ನು ಕೊಡಬೇಕಾಗಿತ್ತು. ಇದನ್ನು ನಿಗದಿಪಡಿಸಲಾಗಿದೆ. ಅವರಿಗೆ ವರ್ಷ ಒಂದಕ್ಕೆ ೨೧ ಸಾವಿರ ಕ್ಯೂಬಿಕ್ ಮೀಟರ್ ಮರವನ್ನು ಕೊಡುವುವಕ್ಕೆ ಅವಕಾಶವಿದ್ದರೂ ಕೂಡ ಅಷ್ಟು ಪ್ರಮಾಣದಲ್ಲಿ ಮರವನ್ನು ನಾವು ಸರಬರಾಜು ಮಾಡುವುದಕ್ಕೆ ಸಾಧ್ಯವಾಗಿಲ್ಲ. ೨೯-೭-೧೯೮೨ರಲ್ಲಿ ಸರ್ಕಾರದಿಂದ ವಿಮ್ಕೋ ಕಂಪನಿಗೆ ವಿನಿಯರ್ ತಯಾರು ಮಾಡುವುದರ ಜೊತೆಗೆ ಬೆಂಕಿಕಡ್ಡಿ ತಯಾರಿಕೆಗೂ ಅನುಮತಿ ಕೊಟ್ಟಿದ್ದಾರೆ.

ಅಧ್ಯಕ್ಷರು.—ತಾವು ಇಷ್ಟು ಧಿರ್ಘವಾಗಿ ಉತ್ತರ ಕೊಡುತ್ತಾ ಹೋದರೆ ಇನ್ನುಳಿದ ಪ್ರಶ್ನೆಗಳಿಗೆ ಯಾವಾಗ ಉತ್ತರಗಳನ್ನು ಒದಗಿಸುವುದು? ಇನ್ನೂ ೯ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದ್ದು ಇದೆ.

ಶ್ರೀ ಬಿ.ಎ. ಜೀವಿಜಯ.—ಮಾನ್ಯ ಸದಸ್ಯರು ಇದರಲ್ಲಿ ಶೇಡೀ ಡೀಲ್ ಆಗಿದೆ ಎಂದು ಹೇಳಿದರು. ಆದ್ದರಿಂದ ನಾನು ಇದನ್ನು ಹೇಳಬೇಕಾಗಿದೆ.

ಶ್ರೀ ಏ.ಎಸ್. ಕೃಷ್ಣನ್.—ತಾವು ಹೇಳುವುದನ್ನು ನೋಡಿದರೆ ಇದು ಒಂದು ರೀತಿಯ ಶೇಡೀಡೀಲ್ ತರಹವೇ ಇದೆ.

ಶ್ರೀ ಬಿ.ಎ. ಜೀವಿಜಯ — ವಿಮ್ಕೋ ಕಂಪೆನಿಯವರು ಸರ್ಕಾರದ ಅನುಮತಿ ಇಲ್ಲದೆ ಮರವನ್ನು ಕೇರಳಕ್ಕೆ ಸಾಗಿಸುತ್ತಿದ್ದರು. ಅವರು ಕಾನೂನು ಉಲ್ಲಂಘನೆ ಮಾಡಿದ್ದರಿಂದ ಇದರ ಬಗ್ಗೆ

ಶಿವಮೊಗ್ಗಾ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಲಾಗಿದೆ. ನ್ಯಾಯಾಲಯದವರು ಇದಕ್ಕೆ ಪರ್ಮನೆಂಟ್ ಆಗಿ ಸ್ಟೇ ಕೊಟ್ಟಿದ್ದಾರೆ. ಆವರ ಮೇಲೆ ಸರ್ಕಾರ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾವು ನ್ಯಾಯಾಲಯವನ್ನು ಕೇಳಿದ್ದೇವೆ. ಸರ್ಕಾರಕ್ಕೆ ಆವರು ಕೊಡಬೇಕಾದ ೨-೩ ಕೋಟಿ ರೂ ಹಣದ ಬಾಬಿನಲ್ಲಿ ಕೇವಲ ೩ ಲಕ್ಷ ರೂ.ಗಳನ್ನು ಮಾತ್ರ ಇಟ್ಟಿದ್ದಾರೆ. ಆದರೆ ಮಾನ್ಯ ಸದಸ್ಯರು ಹೇಳಿದಂತೆ ಇದರಲ್ಲಿ ಯಾವುದೇ ರೀತಿಯ ಶೇಡೀ ಡೀಲಿಂಗ್ಸ್ ಇಲ್ಲ.

ಶ್ರೀ ಎಂ. ಆನಂದರಾವ್.—ಹಾಗಾದರೆ ಸರ್ಕಾರವೇ ಈ ಕೆಲಸವನ್ನು ತನ್ನ ಕೈಗೆ ತೆಗೆದುಕೊಳ್ಳಬಹುದಲ್ಲ.

ಶ್ರೀ ಬಿ.ಎ. ಜೀವಿಜಯ.—ಈ ವಿಚಾರ ನ್ಯಾಯಾಲಯದಲ್ಲಿರುವುದರಿಂದ ಇದು ಇತ್ಯರ್ಥವಾಗುವವರೆಗೆ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ.

ಉತ್ತರ ಕನ್ನಡ ಜಿಲ್ಲೆಯ ಹೊಚಿನ ಕಾರ್ಖಾನೆಗಳಿಗೆ ಉರವಲು ಕಟ್ಟಿಗೆಯ ಪೂರೈಕೆ

೮೭ (೨೧೯) ಶ್ರೀ ಎಂ.ಜಿ. ಜರತಾರಗಾರ್ (ಹುಬ್ಬಳ್ಳಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಉತ್ತರ ಕನ್ನಡ ಜಿಲ್ಲೆಯ ಹೊಚಿನ ೧೪ ಕಾರ್ಖಾನೆಯ ಉತ್ಪಾದನೆ ಕುಂಠಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಈ ಮೇಲ್ಕಂಡ ಹೊಚಿನ ಕಾರ್ಖಾನೆ ಉತ್ಪಾದನೆ ಕುಂಠಿತಗೊಳ್ಳಲು ಸರ್ಕಾರವು ಉರುವಲು ಕಟ್ಟಿಗೆ ಪೂರೈಸದೆ ಇರುವುದಕ್ಕೆ ಕಾರಣವೆಂಬುದು ನಿಜವೇ?

ಇ) ಈ ಮೊದಲು ಮೇಲ್ಕಂಡ ಕಾರ್ಖಾನೆಗಳಿಗೆ ಕೋಟಾ ಪದ್ಧತಿಯ ಮೇರೆಗೆ ಪೂರೈಸಲಾಗುತ್ತಿದ್ದ ಉರುವಲು ಕಟ್ಟಿಗೆ ಪ್ರಮಾಣವೆಷ್ಟು?

ಈ) ಸದ್ಯದ ಹೊಸ ಯೋಜನೆಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಕಾರ್ಖಾನೆಗಳು ತಿಂಗಳೊಪ್ಪತ್ತಿನಲ್ಲಿ ಮುಚ್ಚುವರೆಂದು ಸಂಘದ ಪದಾಧಿಕಾರಿಗಳು ತಮ್ಮಲ್ಲಿ ಕೇಳಿಕೊಂಡಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಉ) ಹಾಗಿದ್ದಲ್ಲಿ, ಹೊಸ ಯೋಜನೆ ಮಾಡಲು ಕಾರಣವೇನು?

ಶ್ರೀ ಜೀವಿಜಯ (ಅರಣ್ಯ ರಾಜ್ಯ ಮಂತ್ರಿಗಳು).—

ಅ) ಸರ್ಕಾರದ ಗಮನಕ್ಕೆ ಬಂದಿಲ್ಲ.

ಆ) ಹೊಚಿನ ಕಾರ್ಖಾನೆಗಳಿಗೂ ಮತ್ತು ಸರ್ಕಾರಕ್ಕೂ ಇದ್ದ ಕರಾರುಗಳು ಈಗ ಚಾಲ್ತಿಯಲ್ಲಿಲ್ಲ. ಆದ್ದರಿಂದ ಉರುವಲು ಕಟ್ಟಿಗೆಯನ್ನು ಸರ್ಕಾರವು ಒದಗಿಸಲಿಲ್ಲ ಎಂಬ ಕಾರಣ ಸರಿಯಲ್ಲ,

ಇ) ಕೋಟಾ ಪದ್ಧತಿಯ ಮೇಲೆ ಹೊಚಿನ ಕಾರ್ಖಾನೆಗಳಿಗೆ ಉರುವಲು ಕಟ್ಟಿಗೆಯನ್ನು ಒದಗಿಸಿಲ್ಲ. ತಾತ್ಕಾಲಿಕ ಹಾಗೂ ದೊರೆಯುವ ಪ್ರಮಾಣದ ಆಧಾರದ ಮೇಲೆ ಅವುಗಳಿಗೆ ಉರುವಲನ್ನು ಒದಗಿಸಲಾಗಿದೆ.

ಈ) ಉರುವಲನ್ನು ಒದಗಿಸಬೇಕೆಂಬ ಮನವಿಯು ಸರ್ಕಾರಕ್ಕೆ ಬಂದಿದೆ.

ಉ) ಉರುವಲನ್ನು ಸಾರ್ವಜನಿಕ ಗೃಹೋಪಯೋಗಕ್ಕೆ ಪೂರ್ಣವಾಗಿ ಒದಗಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಕಾರ್ಖಾನೆಗಳಿಗೆ ಹೇಗೆ ಯಾವ ರೀತಿ ಮತ್ತು ಯಾವ ಪ್ರಮಾಣದಲ್ಲಿ ಪೂರೈಸಬೇಕೆಂಬ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ.ಜಿ. ಜರತಾರಗರ್.—ಉತ್ತರ ಕನ್ನಡ ಜಿಲ್ಲೆಯಲ್ಲಿ ೧೪ ಹೊಚಿನ ಕಾರ್ಖಾನೆಗಳಿಗೆ ಅವಶ್ಯಕವಾದಷ್ಟು ವಾರ್ಷಿಕ ಉರುವಲು ಕಟ್ಟಿಗೆಯನ್ನು ಕೊಡಲಾಗುತ್ತಿತ್ತು: ಆದರೆ, ಈಗ ತಾತ್ಕಾಲಿಕವಾಗಿ ಎಷ್ಟು ಪ್ರಮಾಣದಲ್ಲಿ ವಾರ್ಷಿಕ ಉರುವಲು ಕೊಡುತ್ತಿದ್ದೀರಿ?

ಶ್ರೀ ಬಿ.ಎ. ಜೀವಿಜಯ.—ಉತ್ತರ ಕನ್ನಡ ಜಿಲ್ಲೆಯ ಹೆಂಚಿನ ಕಾರ್ಖಾನೆಗಳಿಗೆ ಒಟ್ಟು ೭೫,೫೦೦ ಟನ್ ಉರುವಲು ಬೇಕೆಂದು ಕೇಳಿದ್ದರು. ಆದರೆ ನಮ್ಮ ರಾಜ್ಯದಲ್ಲಿ ಜನಸಾಮಾನ್ಯರಿಗೇ